ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ಏಳು ಹೊಸ ಜಿಲ್ಲೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಚಿಕ್ಕಬಳ್ಳಾಪುರವನ್ನು ಕೈ ಬಿಟ್ಟಿದ್ದಾರೆಂದು ಗೊತ್ತಿಲ್ಲ. ನಮ್ಮ ಸರ್ಕಾರ ಹೊಸ ಜಿಲ್ಲೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಖಂಡಿತಾ ಇದನ್ನು ಪರಿಶೀಲನೆ ಮಾಡುತ್ತೇನೆ.

(viii) ಬೆಂಗಳೂರಿನ ಸುತ್ತಮುತ್ತ ಸರ್ಕಾರಿ ಜಮೀನುಗಳ ಕಬಳಿಕೆ ಆಗುತ್ತಿರುವುದರ ಬಗ್ಗೆ :

+ ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಸುತ್ತಮುತ್ತ ತಮ್ಮ ಮೂಲಕ ಸೆಳೆಯುತ್ತೇನೆ. ಬೆಂಗಳೂರು ಸುತ್ತಮುತ್ತ ಇರತಕ್ಕ ತುಂಬಾ ಬೆಲೆಬಾಳುವಂತಹ ಜಮೀನನ್ನು ಅದರಲ್ಲೂ ನನ್ನ ಉತ್ತರಹಳ್ಳಿ ಕ್ಷೇತ್ರದಲ್ಲಿ ಸಾಕಷ್ಟು ಬೆಲೆ ಬಾಳುವಂತಹ ಜಮೀನನ್ನು ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ವ್ಯವಸ್ಥಿತವಾಗಿ ಒಂದು ಸಂಚನ್ನು ಮಾಡಿ, ಸರ್ಕಾರ ಕೂಡ ಆ ತರಹ ಮಾಡುವುದಿಲ್ಲ. ಅಷ್ಟು ನೀಟಾಗಿ ಖಾತೆ ಕಂದಾಯ ಮಾಡಿ ಅದನ್ನು ತಿದ್ದಿ ಕೋರ್ಟ್ ಸ್ಟೇ ಆರ್ಡರ್ ಇದ್ದರೂ ಕೂಡ ಅಲ್ಲಿ ಮನೆ ಕಟ್ಟಿಕೊಂಡು 20 ವರ್ಷಗಳಿಂದ ವಾಸ ಮಾಡಿದ ಮೇಲೆ ಅದು ಸರ್ಕಾರಿ ಜಮೀನೆಂದು ಸರ್ಕಾರಕ್ಕೆ ಗೊತ್ತಾಗುತ್ತದೆ. ಅಷ್ಟು ವ್ಯವಸ್ಥಿತವಾಗಿ ಸರ್ಕಾರಿ ಜಮೀನನ್ನು ಲೂಟಿ ಮಾಡುತ್ತಿದ್ದಾರೆ. ಇದರಲ್ಲಿ ಮಾಫಿಯಾ ಗ್ಯಾಂಗ್ ಬ್ಯಾಡ್ ಎಲಿಮೆಂಟ್ಸ್ ರೌಡಿಗಳು ಇನ್‌ವಾಲ್ವ್ ಆಗಿದ್ದಾರೆ. ಸರ್ಕಾರಿ ಜಮೀನನ್ನು ಕಬಳಿಸಿ ಕೋಟ್ಯಾಂತರ ರೂಪಾಯಿ ಕಬಳಿಕೆ ಮಾಡುವಂತಹ ಸಂಚು ಉತ್ತರಹಳ್ಳಿ ಕ್ಷೇತ್ರದಲ್ಲಿ ನಡೆಯುತ್ತಿದೆ. ಇದನ್ನು ನಿಲ್ಲಿಸುವುದಕ್ಕೆ ಟಾಸ್ಕ್‌ಫೋರ್ಸ್ ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿತ್ತು. ತುಂಬಾ ವರ್ಷಗಳಿಂದ ಟಾಸ್ಕ್‌ಫೋರ್ಸ್ ಇದುವರೆಗೆ ಮಾಡಲಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಕಂದಾಯಮಂತ್ರಿಗಳು ಹೇಳಿದ್ದಾರೆ. ಕಂದಾಯ ಮಂತ್ರಿಗಳೂ ಪ್ರೆಸ್‌ಮೀಟ್ ಮಾಡಿ ಹೇಳಿದ್ದಾರೆ. ಹತ್ತು ಪ್ರೆಸ್‌ಮೀಟ್‌ನಲ್ಲಿ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅದನ್ನು ಇದುವರೆಗೆ ಮಾಡಲಿಲ್ಲ. ಭೂ ಕಬಳಿಕೆಯಂತೂ ನಡೆಯುತ್ತಲೇ ಇದೆ. ಕಬಳಿಕೆ ಯಾವರೀತಿ ನಡೆಯುತ್ತಿದೆ ಎನ್ನುವ ಬಗ್ಗೆ ಒಂದು ಇನ್ಸಿಡೆಂಟ್ ಹೇಳುತ್ತೇನೆ. ಕೆಂಗೇರಿ ಬೆಂಗಳೂರಿಗೆ ದ 12 ಕಿಲೋಮೀಟರ್ ದೂರದಲ್ಲಿದೆ. ಸುಮಾರು 150 ಎಕರೆ ಸರ್ಕಾರಿ ಜಮೀನು ಒಂದೇ ಜಾಗದಲ್ಲಿದೆ. ಕಂದಾಯ ಅಧಿಕಾರಿಗಳು ಅತಿಕ್ರಮ ಮಾಡಿರುವವರನ್ನು ತೆರವುಮಾಡಿಸಿ ತಮ್ಮ ಸುಬರ್ದಿಗೆ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ತೆಗೆದುಕೊಳ್ಳಲಿಲ್ಲ. ಹಿಂದಿನ ಅಧಿಕಾರಿಗಳು ನೀವು ಏನು ಬೇಕಾದರೂ ಮಾಡಿಕೊಳ್ಳಿಯೆಂದು ಬಿಟ್ಟುಬಿಟ್ಟರು. ಸರ್ವೆ ನಂಬರ್ ಮತ್ತು ಗ್ರಾಮಗಳ ಹೆಸರು ಹೇಳುತ್ತೇನೆ. ಕುಂಬಳಗೋಡು, ಕಣಿಮಿಣಿಕೆ ಮತ್ತು ಕಂಬೀಪುರ. ಸರ್ವೆ ನಂಬರ್ 180. ಬೆಂಗಳೂರಿಗೆ 12 ಕಿಲೋಮೀಟರ್ ಹತ್ತಿರವಿರತಕ್ಕ ಈ ಊರುಗಳಲ್ಲಿ 150 ಎಕರೆ ಜಮೀನು ಒಂದೇ ಕಡೆ ಇದೆ. ಅಷ್ಟು ಸರ್ಕಾರೀ ಜಮೀನನ್ನು ಏಕೆ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಿಲ್ಲ? ಅಲ್ಲಿನ ಜನ ತಿರುಗಿಬಿದ್ದು ಅವರೇ ಕೋರ್ಟಿಗೆ ಹೋದರು. ಸರ್ಕಾರಿ ಅಧಿಕಾರಿಗಳು ಆ ಕೆಲಸವನ್ನು ಮಾಡಲಿಲಲ್ಲ, ಅಲ್ಲಿನ ಜನ ನಾಗರೀಕ ವೇದಿಕೆ ಮಾಡಿಕೊಂಡು ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟರು. ಅದನ್ನು ಸರ್ಕಾರ ಅಕ್ಸೆಪ್ಟ್ ಮಾಡಲಿಲ್ಲ. ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಹಾಕಿದ್ದಾರೆ. ಅದರ ಮೇಲೆ ಹೈಕೋರ್ಟ್ ಆರ್ಡರ್

ಮಾಡಿದೆ. ದಿನಾಂಕ 5- 1- 1998 ರಂದು ಇದು ಸರ್ಕಾರಿ ಜಮೀನೆಂದು ಹೈಕೋರ್ಟ್ ಆರ್ಡರ್ ಮಾಡಿದೆ. ಸರ್ಕಾರದವರಿಗೆ ಇದು ಸರ್ಕಾರಿ ಜಮೀನೆಂಬುದು ಗೊತ್ತೇ ಇರಲಿಲ್ಲ. ಹೈಕೋರ್ಟ್ ಕ್ಲಿಯರ್ ಡೈರೆಕ್ಷನ್ ಕೊಟ್ಟಿದೆ. ಆ ಜಾಗವನ್ನು ಆಟದ ಮೈದಾನಕ್ಕೆ ಮೀಸಲಿಡಬೇಕು, ಶಾಲೆಗೆ ಆಸ್ಪತ್ರೆಗೆ ಮೀಸಲಿಡಬೇಕು. ನಾಲ್ಕು ತಿಂಗಳೊಳಗೆ ಇದನ್ನು ಪಾಲನೆ ಮಾಡಬೇಕೆಂದು ರೆವಿನ್ಯು ಇಲಾಖೆಗೆ ಆದೇಶ ಕೊಟ್ಟು ಮೂರು ವರ್ಷಗಳಾಯಿತು. ಇದುವರೆಗೆ ಆ ಜಮೀನನ್ನು ಸರ್ಕಾರ ತನ್ನ ಸುಬರ್ದಿಗೆ ತೆಗೆದುಕೊಂಡಿಲ್ಲ. ಇದರ ಬಗ್ಗೆ ನಾನು ಹಿಂದೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಂದಾಯ ಮಂತ್ರಿಗಳಿಗೆ ಜಿಲ್ಲಾಧಿಕಾರಿಗಳಿಗೆ ಲೆಟರ್ ಬರೆದಿದ್ದೇನೆ. ಈ ಸಾರಿ ನಾನು ಮತ್ತೆ ಶಾಸಕನಾಗಿ ಉತ್ತರಹಳ್ಳಿ ಕ್ಷೇತ್ರದಿಂದ ಆರಿಸಿ ಬಂದಿದ್ದೇನೆ. ಈಗಲೂ ಲೆಟರ್ ಬರೆದಿದ್ದೇನೆ. ತಾವು ಏನಾದರೊಂದು ಕಾರಣ ತೋರಿಸುವುದು ಸರಿಯಲ್ಲ. ಕೋರ್ಟ್ ಆದೇಶವಿದ್ದರೂ ಸಹ ಕೆಳಗಡೆ ಇರತಕ್ಕ ಅಧಿಕಾರಿಗಳು ಕಬಳಿಸಿರುವ ವ್ಯಕ್ತಿಗಳಿಗೆ ಲೇನಿಯೆನ್ಸ್ ಕೊಟ್ಟು ಎರಡು ಮೂರು ತಿಂಗಳೊ ಟೈಮ್ ಕೊಟ್ಟು ಅವರು ಕೋರ್ಟ್‌ಗೆ ಹೋಗಿ ಸ್ಟೇ ತರುವುದು ಇವರು ಬಿಡುವುದು ಆಗಿದೆ. ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ.

ಶ್ರೀ ಹೆಚ್.ಸಿ.ಶ್ರೀ ಕಂಠಯ್ಯ : ಮಾನ್ಯ ಸದಸ್ಯರು, ಹೇಳಿದ್ದನ್ನೇ ಪುನಃ ಹೇಳುತ್ತಿದ್ದಾರೆ.

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪುನಃ ಹೇಳಿ.

ಶ್ರೀ ಆರ್.ಅಶೋಕ್ : ಕೆಂಗೇರಿ ಹೋಬಳಿ ಸರ್ವೆ ನಂಬರ್ 180 ರಲ್ಲಿ ಬೋಗಸ್ ದಾಖಿಸೆ ಸೃಷ್ಟಿ ಮಾಡಿಕೊಂಡು ಸುಮಾರು 25 ಎಕರೆ ಜಮೀನನನ್ನು ಆಕ್ರಮಿಸಿಕೊಂಡಿದ್ದಾರೆ. ಅಧಿಕಾರಿಗಳು ಲೇನಿಯನ್ಸ್ ಕೊಟ್ಟಿದ್ದಕ್ಕೆ ಹೀಗೆ ಆಗಿದೆ. ಅಲ್ಲಿ ತಹಶೀಲ್ದಾರ್ ಅಸಿಸ್ಟೆಂಟ್ ಕಮಿಷನರ್, ಜಿಲ್ಲಾಧಿಕಾರಿಗಳು ಯಾರೇ ಇರಬಹುದು. ಆಕ್ರಮಿಸಿಕೊಂಡಿರುವವರು ಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಸರ್ಕಾರ ಇಷ್ಟು ನೆಗ್ಲಿಜೆನ್ಸ್ ಮಾಡುತ್ತಿದೆ. ಬೆಂಗಳೂರಿನಲ್ಲಿ ತಾವು ಹೇಳಿಕೆ ಕೊಡುತ್ತೀರಿ. ನಮ್ಮ ಕಂದಾಯ ಮಂತ್ರಿಗಳು ಪ್ರೆಸ್ ಮೀಟ್ ಮಾಡಿದ್ದಾರೆ. ಸಾವಿರಾರು ಕೋಟಿ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ, ಎಲ್ಲಿ ತೆಗೆದುಕೊಂಡಿದ್ದೀರಿ ಸ್ವಾಮಿ? ಹತ್ತು ಪರ್ಸೆಂಟ್ ಕೂಡ ನೀವು ತೆಗೆದುಕೊಂಡಿಲ್ಲ. ಸುಮ್ಮನೆ ದಾಖಿಲೆಯಲ್ಲಿ ತೋರಿಸಿದ್ದೀರಿ. ಎಲ್ಲಿ ತೆರವು ಮಾಡಿಸಿದ್ದೀರಿ? ಎಲ್ಲಿ ಅಕ್ವೈರ್ ಮಾಡಿದ್ದೀರಿ? ಹತ್ತು ಪರ್ಸೆಂಟ್ ಕೂಡ ನೀವು ಪೋಸಿಷನ್‌ಗೆ ತೆಗೆದುಕೊಂಡಿಲ್ಲ. ಸಾವಿರಾರು ಎಕರೆ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇನೆಂದು ಸ್ಟೇರ್‌ಮೆಂಟ್ ಕೊಟ್ಟಿದ್ದೀರಿ. ಜನ ಕೇಳುತ್ತಾರೆ, ನಮಗೆ ಸ್ಮಶಾನಕ್ಕೆ ಭೂಮಿ ಬೇಕು ಕೊಡಿಯೆಂದು. ಎಲ್ಲ ಅವರೇ ಇಟ್ಟುಕೊಂಡಿದ್ದಾರೆ. ತಾವು ಹೇಳಿಕೆ ಕೊಟ್ಟರುವುದನ್ನು ಜಾರಿಗೆ ತನ್ನಿ. ಸರ್ಕಾರಿ ಜಮೀನನ್ನು ಉಳಿಸಿಯೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸುಬ್ಬಾರೆಡ್ಡಿಯವರೆ, ತಾವು ದಯವಿಟ್ಟು ಕುಳಿತುಕೊಳ್ಳಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪ್ರಸ್ತಾಪ ಮಾಡಿ. ಈಗ ಮಾನ್ಯ ಕಂದಾಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : (ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿ ಕೋರಿ ಓದುತ್ತೇನೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಕುಂಬಳಗೋಡು ಗ್ರಾಮದ ಸರ್ವೆ ನಂಬರ್ 25, 30 ಮತ್ತು ಕಣಿಮಿಣಿಕೆ ಗ್ರಾಮದ ಸರ್ವೆ ನಂಬರ್ 41, 42, 88, 95 ಇವು ಸರ್ಕಾರಿ ಖರಾಬು, ಗುಟ್ಟೆ, ಹಳ್ಳ, ಹಾಗೂ ಗೋಮಾಳದ ಜಮೀನಾಗಿರುತ್ತದೆ. ಇವುಗಳ ಒಟ್ಟು ವಿಸ್ತೀರ್ಣ 498.03 ಎಕರೆ ಇದ್ದು, ಈ ಪೈಕಿ 300.06 ಎಕರೆ ಈಗಾಗಲೇ ಮಂಜೂರಿಯಾಗಿದ್ದು, ಬಾಕಿ ಉಳಿದಿರುವ 197.37 ಎಕರೆಯನ್ನು 119 ಜನರು ಅನಧಿಕೃತವಾಗಿ ಕಳೆದ 20-25 ವರ್ಷಗಳಿಂದ ಸಾಗುವಳಿ ಮಾಡಿರುತ್ತಾರೆ.

ಶ್ರೀ ನರಸಿಂಹಮೂರ್ತಿ ಎಂಬುವವರು ಈ ಜಮೀನುಗಳನ್ನು ಗೋಮಾಳವನ್ನಾಗಿ ಉಳಿಸಿಕೊಳ್ಳುವ ಬಗ್ಗೆ 1997ರಲ್ಲಿ ಕರ್ನಾಟಕ ಉಚ್ಚತಮ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 35753/1997ನ್ನು ಸಲ್ಲಿಸಿದ್ದರು. ಕರ್ನಾಟಕ ಉಚ್ಚತಮ ನ್ಯಾಯಾಲಯವು ಈ ಅರ್ಜಿಯನ್ನು ವಿಚಾರಣೆ ಮಾಡಿ ದಿನಾಂಕ 5-1-1998ರಂದು ಅರ್ಜಿದಾರರು ಈ ವಿಚಾರದಲ್ಲಿ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳಿಗೆ ಎಲ್ಲಾ ವಿವರಗಳನ್ನು ನೀಡಿ ಅರ್ಜಿ ಸಲ್ಲಿಸಬೇಕೆಂದು, ಉಪವಿಭಾಗಾಧಿಕಾರಿಗಳು ಒತ್ತುವರಿ ಮಾಡಿರುವ ಸಂಬಂಧಪಟ್ಟವರಿಗೆ ನೋಟೀಸ್ ನೀಡಿ, ಈ ಬಗ್ಗೆ ಕೂಲಂಕುಷ ವಿಚಾರಣೆ ಮಾಡಿ ಕರ್ನಾಟಕ ಭೂ ಕಂದಾಯ ನಿಯಮಾವಳಿ 1966ರ ನಿಯಮ 97ರಂತೆ ಗೋಮಾಳಕ್ಕೆ ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಅವಶ್ಯವಿದ್ದ ಜಮೀನುಗಳನ್ನು ಕಾದಿರಿಸಲು 4 ತಿಂಗಳು ಅವಧಿ ಒಳಗೆ ಕ್ರಮ ತೆಗೆದುಕೊಳ್ಳಲು ಆದೇಶಿಸಿತ್ತು.

ಶ್ರೀ ನರಸಿಂಹಮೂರ್ತಿಯವರು ದಿನಾಂಕ 9-10-1998ರಂದು ಉಪ ವಿಭಾಗಾಧಿಕಾರಿಗಳಿಗೆ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಮನವಿ ಮಾಡಿದ್ದರು. ಉಪವಿಭಾಗಾಧಿಕಾರಿಗಳು ಕರ್ನಾಟಕ ಉಚ್ಚತಮ ನ್ಯಾಯಾಲಯದ ಮೇಲಿನ ಆದೇಶದಂತೆ ಸಂಬಂಧಪಟ್ಟ ಎಲ್ಲಾ ಅಕ್ರಮ ಒತ್ತುಪರಿದಾಗಿಗೆ ಹಾಗೂ ಪಂಚಾಯತ್‌ದಾರರಿಗೆ ನೋಟೀಸ್ ಜಾರಿ ಮಾಡಿ ಸಮಗ್ರ ವಿಚಾರಣೆ ಮಾಡಿ ಅವರನ್ನು ಹೊರದೂಡಲು ಸಂಬಂಧಪಟ್ಟ ಒತ್ತುಪರಿದಾರರಿಗೆ ಖಿಲ್ಲಾಪಡಿಸುವ ನೋಟೀಸುಗಳನ್ನು ಜಾರಿ ಮಾಡಿರುತ್ತಾರೆ. ಉಪ ವಿಭಾಗಾಧಿಕಾರಿಗಳು ಖಿಲ್ಲಾಪಡಿಸಲು ತೆಗೆದುಕೊಂಡ ಈ ಕ್ರಮದ ಬಗ್ಗೆ ಶ್ರೀ ಶ್ರೀನಿವಾಸ ಹಾಗೂ ಇತರ 11 ಜನ ಮತ್ತು ಶ್ರೀ ಕದಿರಪ್ಪ ಹಾಗೂ ಇತರ 21 ಜನರು ಕರ್ನಾಟಕ ಉಚ್ಚತಮ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 21777-21798/99, 23924-23925/2000ಗಳಲ್ಲಿ ಉಪವಿಭಾಗಾಧಿಕಾರಿಗಳ ಕ್ರಮವನ್ನು ಪ್ರಶ್ನಿಸಿದ್ದರು. ತಾವುಗಳು ಬಗರ್ ಹುಕುಂ ಸಾಗುವಳಿ ಸಕ್ರಸಕ್ಕಾಗಿ ಅರ್ಜಿ ಸಲ್ಲಿಸಿದ್ದು ಇವುಗಳ ಇನ್ನೂ ತೀರ್ಮಾನವಾಗಿರುವುದಿಲ್ಲವೆಂದು, ವಿಲೇ ಆಗಲು ಬಾಕಿ ಇರುವುದರಿಂದ ಉಪವಿಭಾಗಾಧಿಕಾರಿಗಳ ಕ್ರಮಕ್ಕೆ ತಡೆ ಆಜ್ಞೆ ನೀಡಬೇಕೆಂದು ಮನವಿ ಮಾಡಿದ್ದರು. ಕರ್ನಾಟಕ ಉಚ್ಚ ನ್ಯಾಯಾಲಯವು ತಮ್ಮ ದಿನಾಂಕ 16-08-1999, 25-08-2000ರ ಆದೇಶದಲ್ಲಿ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದವರ ಅರ್ಜಿಗಳ ವಿಲೇವಾರಿ ಆಗುವವರೆಗೆ ಈ ಒತ್ತುವರಿದಾರರನ್ನು ಖಿಲ್ಲಾಪಡಿಸಬಾರದೆಂದು ಆದೇಶ ನೀಡಿತ್ತು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮ ಸಮಿತಿಯನ್ನು ದಿನಾಂಕ 5-12-2000 ರಂದು ಅಧಿಸೂಚನೆ ಸಂಖ್ಯೆ. ಆರ್ ಡಿ 196 ಎಲ್ ಜಿ ಬಿ 2000ದಲ್ಲಿ ರಚಿಸಲಾಗಿದೆ. ಈ ಎಲ್ಲಾ ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ಸಮಿತಿಯ ಮುಂದೆ ಶೀಘ್ರವಾಗಿ ಮಂಡಿಸಲು ತಹಶೀಲ್ದಾರರಿಗೆ ಫಾರಂ 50 ಮತ್ತು 53ರ ಅರ್ಜಿಗಳನ್ನು ಸಮಿತಿಯ ಮುಂದೆ ಶೀಘ್ರ ಮಂಡಿಸಲು ಸೂಚನೆ ನೀಡಲಾಗಿದೆ. ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94ಎ, 94ಬಿ ರಂತೆ ಬತಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 18 ಕಿಲೋಮೀಟರ್ ಒಳಗಡೆ ಇರುವ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶ ಇರುವುದಿಲ್ಲ. ಅರ್ಜಿಗಳನ್ನು ಸಮಿತಿಯು ವಿಲೇ ಮಾಡಿದ ಕೂಡಲೇ ಖುಲ್ಲಾಪಡಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಬೆಂಗಳೂರು ಉತ್ತರಹಳ್ಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ, ಉತ್ತರಹಳ್ಳಿ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಗೆ ಸಂಬಂದಿಸಿದಂತೆ 85 ಪ್ರಕರಣದಲ್ಲಿ 1521.00 ಎಕರೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಭೂಮಿಯನ್ನು ಕಬಳಿಸಿರುವುದನ್ನು ಪತ್ತೆಹಚ್ಚಲಾಗಿದೆ. ಈ ಖಾತೆಗಳನ್ನು ರದ್ದುಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ. 50 ಪ್ರಕರಣಗಳಿಗೆ ಸಂಬಂಧಿಸಿದಂತೆ 1060.14 ಎಕರೆ ಜಮೀನಿಗೆ ಈಗಾಗಲೇ ಖಾತೆಗಳನ್ನು ರದ್ದುಪಡಿಸಿ, ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಈ ಪ್ರಕರಣಗಳಲ್ಲಿ ಶಾಮೀಲಾಗಿದ್ದ 14 ಕಂದಾಯ ಇಲಾಖೆಯ ಸಿಬ್ಬಂದಿ ವಿರುದ್ದ ಶಿಸ್ತಿನ ಕ್ರಮ ಪ್ರಾರಂಭಿಸಿದ್ದು, 4 ಸಿಬ್ಬಂದಿಗಳನ್ನು ಅಮಾನತ್ತಿನಲ್ಲಿರಿಸಲಾಗಿದೆ. ಈ ಭೂ ಕಬಳಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸುತ್ತಿದೆ.

ಅಧ್ಯಕ್ಷರು : ಅಶೋಕ್‌ರವರೇ, ಒಂದು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಆರ್. ಅಶೋಕ್ : ಕಂದಾಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅವರೆಲ್ಲರೂ ಕಚೇರಿಗೆ ವಾಪಸ್ಸು ಬಂದುಬಿಟ್ಟಿದ್ದಾರೆ. ನಾಲ್ಕು ಜನರನ್ನು ಬಿಟ್ಟರೆ ಬಾಕಿ ಎಲ್ಲರೂ ವಾಪಸ್ಸು ಬಂದಿದ್ದಾರೆ. ಕುಂಬಳಗೋಡಿನಲ್ಲಿರುವ ಸೆಕ್ರೆಟರಿ ಮಾರುತಿ ಕಾರಿನಲ್ಲಿ ಬರುತ್ತಾನೆ. ಮೊನ್ನೆ ಐಕಾನ್ ಕಾರಿಗೆ ಅಪ್ಲೈ ಮಾಡಿದ್ದಾನಂತೆ. ಆತ ಅವ್ಯವಹಾರ ಮಾಡಿದವನು ಮಾರುತಿ ಕಾರಿನಲ್ಲಿ ಬರುತ್ತಾನೆ. ಆತನ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ? ಕೆಂಗೇರಿ ಒಂದರಲ್ಲೇ ನೂರು-ಇನ್ನೂರು ಕೋಟಿ ರೂಪಾಯಿ ಅವ್ಯವಹಾರವಾಗಿದೆ. ಇದರಲ್ಲಿ ಎಲ್ಲರ ಕೈವಾಡ ಇದೆ. ಕಂದಾಯ ಅಧಿಕಾರಿಗಳು, ರೆವಿನ್ಯೂ ಇನ್‌ಸ್ಪೆಕ್ಟರ್.....

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಒಟ್ಟು 29 ಜನರನ್ನು ನಾವು ಸಸ್ಪೆಂಡ್ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಸಸ್ಪೆಂಡ್ ಮಾಡಿದ್ದಾರಲ್ಲ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಅವರು ಮನೆಯಲ್ಲೇ ಇದ್ದಾರೆ. ಯಾರೂ ವಾಪಸ್ಸು ಬಂದಿಲ್ಲ.

ಶ್ರೀ ಆರ್. ಅಶೋಕ್ : ನಾನು ಎನ್‌ಕ್ವೈರಿ ಮಾಡಿದ್ದೇನೆ. ಎಲ್ಲರೂ ವಾಪಸ್ಸು ಬಂದಿದ್ದಾರೆ. ಆರು ಜನರನ್ನು ಬಿಟ್ಟು ಬಾಕಿ ಎಲ್ಲರೂ ವಾಪಸ್ಸು ಬಂದಿದ್ದಾರೆ. ಆರು ಜನರು ಮಾತ್ರ ಉಳಿದಿರುವುದು....

ಅಧ್ಯಕ್ಷರು : ಆಯಿತು ಬಿಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ದಯವಿಟ್ಟು ಯಾರ್ಯಾರು ವಾಪಸ್ಸು ಬಂದಿದ್ದಾರತ ಅವರ ಹೆಸರುಗಳನ್ನು ಹೇಳಲಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಹೇಳಿ

ಅಧ್ಯಕ್ಷರು : ರೆಡ್ಡಿಯವರೇ, ಮಂತ್ರಿಗಳಿಗೆ ಗೊತ್ತಿಲ್ಲ. ಯಾರು ಬಂದಿದ್ದಾರೆಂದು ಅಶೋಕ್‌ರವರು ಹೇಳಬೇಕು.

ಶ್ರೀ ಆರ್. ಅಶೋಕ್ : ಆರು ಜನ ಮಾತ್ರ ಉಳಿದಿದ್ದಾರೆ. ಇನ್ನು ಎಲ್ಲರನ್ನೂ ವಾಪಸ್ಸು ತೆಗೆದುಕೊಂಡಿದ್ದೇವೆ ಎಂದು ಅಧಿಕಾರಿಗಳು ಹೇಳುತ್ತಾರೆ. ಹೆಸರುಗಳನ್ನು ಕೇಳುತ್ತಿದ್ದಾರೆ. ನಾಳೆಯೇ ನಾನು ತಂದುಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಅದಕ್ಕೆ ಬೇರೆ ಪ್ರಶ್ನೆ ಕೇಳಲಿ

ಅಧ್ಯಕ್ಷರು : ಬೇರೆ ಪ್ರಶ್ನೆ ಕಳಿಸಿ. ಉತ್ತರ ಹೇಳುತ್ತೇನೆ ಎಂದು ಮಂತ್ರಿಯವರು ಹೇಳುತ್ತಿದ್ದಾರೆ. ಈಗ ಸಭೆ ಮುಂದುವರೆದು ಪುನಃ 3-15ಗಂಟೆಗೆ ಸೇರುತ್ತದೆ

(2-05ಗಂಟೆಗೆ ಸಭೆ ಮುಕ್ತಾಯಗೊಂಡು ಪುನಃ 3-15ಗಂಟೆಗೆ ಸೇರಲು ನಿರ್ಧರಿಸಲಾಯಿತು)

ಸದನವು ಮಧ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಪುನರಾರಂಭಗೊಂಡಿತು

(ಮಾನ್ಯ ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

3. ರಾಜ್ಯ ಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಅಧ್ಯಕ್ಷರೇ, ನಿನ್ನೆ ನಾನು ಮಾತನಾಡುತ್ತಾ ಈ ರಾಜ್ಯದ ಆಡಳಿತದಲ್ಲಿ ತರಬೇಕಾದಂತಹ ಬದಲಾವಣೆ, ಸುಧಾರಣೆಗಳು, ಪಾರದರ್ಶಕವಾದ ಆಡಳಿತ ಕುರಿತು ಪ್ರಸ್ತಾಪಿಸಿದ್ದೆ. ರಾಜ್ಯಪಾಲರ ಭಾಷಣದಲ್ಲಿ ನಾನು ಪ್ರಮುಖವಾಗಿ ಕಂಡಂತಹ ಮೂರು ರಾಷ್ಟ್ರೀಯ ಸಮಸ್ಯೆಗಳನ್ನು ಇಂದು ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೊದಲನೆಯದು, ಪ್ರಾಥಮಿಕ ಶಿಕ್ಷಣ, ಎರಡನೆಯದು ಪರಿಸರ, ಮೂರನೆಯದು ಜನಸಂಖ್ಯಾ ನಿಯಂತ್ರಣ. ಪ್ರಾಥಮಿಕ ಶಿಕ್ಷಣದ ಬಗ್ಗೆ ಪ್ಯಾರ 23, 24, 25ರಲ್ಲಿ ಕರ್ನಾಟಕ ರಾಜ್ಯದಲ್ಲಿ ಜನಸಾಮಾನ್ಯರನ್ನು ವಿದ್ಯಾವಂತರನ್ನಾಗಿ ಮಾಡಲು ತೆಗೆದುಕೊಂಡ ಕ್ರಮಗಳ ಬಗ್ಗೆ